ದಿನಪತ್ರಿಕೆ
1 ಕಾಸು
ತಿಂಗಳಿಗೆ
ವಾರಪತ್ರಿಕೆ ಸೇರಿ
4 ಆಣೆ

Regd. No. M 1299 SATYAVADI

# ಸತ್ಯವಾದಿ

ಸಂಪುಟ 26] ಶುಕ್ರವಾರ 22—1—1943 [ಸಂಚಿಕೆ 8ರ

ಅಕ್ಕರ ಸಾ ವಾ ಜಿ ಕ
ಭಾವಪರಿಪೂರ್ಣವಾದ ಕಥೆ. ಓದಲು ಪ್ರಾರಂಭಿಸಿದರೆ ಕಥೆ ಪೂರೈಸುವ ವರೆಗೂ ಊಟಕ್ಕೆ ಕೂಡ ಏಳಲು ಮನ ಸ್ಸಾಗುವುದಿಲ್ಲ. ಬೆಲೆ 6 ಆಣೆ. ಪೋಸ್ಟೇ. ಜು 1 ಆಣೆ. ಮುಂಗಡ ಕಳುಹಿಸಬೇಕು
ಸತ್ಯವಾದಿ ಆಫೀಸ್ ಮೈಸೂರು

## ಮೈಸೂರಿಗೆ ಮತ್ತೊಬ್ಬರು ಖಾಸಗಿ ಮಂತ್ರಿಗಳೇ?

### ಲಂಡನ್ ಮೇಲೆ ದಾಳಿ

20 ನೇ ತಾರೀ ಲಂಡನ್ ಮೇಲೆ ಬೆಳಿಗ್ಗೆ ಹೊತ್ತಿ ಜರ್ಮನ್ ವಿಮಾನಗಳು ದಾಳಿ ನಡೆಸಿ ಸ್ವಲ್ಪ ಸಾವು ನೋವು ಉಂಟು ಮಾಡಿದವೆಂದೂ ಈ ಪೈಕಿ 14 ಹೊಡೆದು ರಿಳಿಸಲಾಯಿತೆಂದೂ ತಿಳಿಯಬಂದಿದೆ.

### ಸಾನಾನಂದದಲ್ಲಿ ಜಪಾನರು

ಸಾನಾನಂದದಲ್ಲಿ ಶತ್ರುಗಳ ಸ್ಥಾನಗಳು ಹಿಡಿಯಲಾಗಿವೆ. ನೂರಾರು ಮಂದಿ ಜಪಾನ್ ಸೈನಿಕರು ಕೊಲ್ಲಲ್ಪಟ್ಟಿರುವರು. ಆಸ್ಟ್ರೇಲಿಯನ್ನರು ಜಪಾನರನ್ನು ಅಲ್ಲಿ ನಿರ್ನಾಮ ಮಾಡುತ್ತಿದ್ದಾರೆ.

ಗುಡಲ್‌ಕೆನಾರಿನಲ್ಲಿ 1200 ಮಂದಿ ಜಪಾನರು ಕೊಲ್ಲಲ್ಪಟ್ಟಿರುವರು,

### ಶತ್ರು ಹಡಗು ನಷ್ಟ

ಹಾಲೆಂಡ್ ಆಚೆ ಶತ್ರು ಸಾಮಗ್ರಿ ಹಡಗುಗಳು ಮುಳುಗಿಸಲ್ಪಟ್ಟವೆಂದು ತಿಳಿಯಬಂದಿದೆ,

### ಸಹಾಯ ಸಾಲದು

ಅಮೇರಿಕಾವು ರಷ್ಯಾಕ್ಕೆ ಮಾಡಿರುವ ಸಹಾಯವು ರಷ್ಯಾಕ್ಕೆ ಅವಶ್ಯಕವಾದಷ್ಟು ಅಲ್ಲ.

ರಾಜಧರ್ಮಪ್ರವೀಣ ಶ್ರೀ ರಾಮನಾಥ್ ರವರು ಭರತಪುರದ ದಿವಾನರಾದುದರಿಂದ, ಅವರ ಸ್ಥಾನಕ್ಕೆ ಖಾ ಸ ಮಂತ್ರಿಗಳೊಬ್ಬರು ನೇಮಿಸಲ್ಪಡಬಹುದೆಂದು ತಿಳಿಯಬಂದಿದೆ.

### ಶ್ರೀ ಇಂದಿರಾ ನೆಹರು

ಶ್ರೀ ಪಂಡಿತ ಜವಹರಲಾಲರ ಪುತ್ರಿ ಶ್ರೀ ಇಂದಿರಾನೆಹರುರವರು ತಮ್ಮ ನೆಂಟರಿಷ್ಟರಿಗೆ ಕಾಗದ ಬರೆಯಲು ಸರ್ಕಾರದವರು ಅವಕಾಶಕೊಟ್ಟಿಲ್ಲವಂತೆ.

### LATEST NEWS

ಹೊಂಸ್ ಮತ್ತು ಟಾರ್ಕೂನಾವನ್ನು ಬ್ರಿಟಿಷ್ 8 ನೆ ಸೈನ್ಯವು ಹಿಡಿದಿದೆ.

ನಾಳೆ ಮದರಾಸ್ ಬೊಂಬಾಯಿಗಳಲ್ಲಿ ಕುದುರೆ ಜೂಜಿದೆ.

ಯುದ್ಧನಿಧಿಗಾಗಿ ಕಲ್ಕತ್ತಾದಲ್ಲಿ 31 ನೇ ಜನವರಿಯಲ್ಲಿ ನಡೆಯಬೇಕಾಗಿದ್ದ ಗೌರ್ನರ್ಸ್ 11 ಮತ್ತು ಈಸ್ಟರ್ನ್ ಆರ್ಮಿ ಕಮ್ಯಾಂಡರ್ಸ್ 11 ಕ್ರಿಕೆಟ್ ಪಂದ್ಯವನ್ನು ಸೈನ್ಯದ ಆಟಗಾರರು ಬಿಡಲ್ಪಡ ವುದರಿಂದ ಪಜಾಮಾಡಲಾಗಿದೆ,

### ಟುನಿಷಿಯಾದಲ್ಲಿ ಶತ್ರುಗಳು ಮುಂದುವರಿಯುತ್ತಿದ್ದಾರೆ

ಟುನಿಷಿಯಾದಲ್ಲಿ ಅಕ್ಸಿಸ್ ಸೈನ್ಯ 7 ಮೈಲಿ ಮುನ್ನುಗ್ಗಿವೆ.

### ರಷ್ಯಾದ ವಿಜಯ

ವೊರನಾಜ್ ರಂಗದಲ್ಲಿ ರಷ್ಯನರು ವಿಜಯಿಗಳಾಗುತ್ತಿದ್ದಾರೆ.

### ಪೋಲೀಸ್ ಸ್ಟೇಷನ್ನಿನಲ್ಲಿ ಕಳ್ಳತನ

ಪುಲ್ಲಂಪೇಟ ಹಳ್ಳಿ ಪೋಲೀಸ್ ಸ್ಟೇಷನ್ನಿಗೆ ಕಳ್ಳರು ನುಗ್ಗಿ ಅಲ್ಲಿದ್ದ ಬಂದೂಕ ಮದ್ದು ಗುಂಡು ಮತ್ತಿತರ ಸಾಮಾನುಗಳನ್ನು ಪಾರಿಸಿಕೊಂಡು ಪರಾರಿಯಾದರು.

### ಕಪ್ಪೆಯ್ಯ ಅಜ್ಜಪ್ಪ

ಅಜಮೀದಾಬಾದಿನಲ್ಲಿ ಕಪ್ಪೆಯ್ಯ ಅಜ್ಜಪ್ಪ ಜಾರಿಯಲ್ಲಿದೆ.

### ಪುಂಡು ಕಂದಾಯ

ಕೃಷ್ಣಾ ಡಿಸ್ಟ್ರಿಕ್ಟಿನ ಅನೇಕ ಹಳ್ಳಿಗಳ ಮೇಲೆ ಪುಂಡು ಕಂದಾಯ ವಿಧಿಸಲಾಗಿದೆ.

### ಆಹಾರ ಪದಾರ್ಥ ರೇಷನಿಂಗ್

ಬೊಂಬಾಯಿನಲ್ಲಿ ಆಹಾರ ಪದಾರ್ಥ ರೇಷನಿಂಗ್ ಏಪ್ರಿಲ್‌ನಿಂದ ಜಾರಿಗೆ ಬರುವುದು.

## ಆಹಾರ ಸಾಮಗ್ರಿಗಳ ಆಭಾವ

ಇಂಡಿಯಾ ದೇಶದ ಅನೇಕ ಭಾಗಗಳಲ್ಲಿ ಆಹಾರ ಪದಾರ್ಥಗಳ ಆಭಾವವು ಹೆಚ್ಚಿದೆ. ಗೋಧಿ, ಅಕ್ಕಿ, ಸಕ್ಕರೆ, ಕಾಗದ, ಸೀಮೆ ಎಣ್ಣೆ, ರಾಗಿ, ಜೋಳ್ಳ ಇವುಗಳಿಗಾಗಿ ಪ್ರಜೆಗಳು ಪಡುತ್ತಿರುವ ಪಾಡು ಅನಿರ್ವಚನೀಯವಾಗಿದೆ. ಪಾಲಕರೂ ಶ್ರೀಮಂತರೂ ದುಸ್ಥಿತಿಯನ್ನು ಎದುರಿಸುತ್ತಿರುವರಾಗಲಿ ಇನ್ನೂ ಹೆಚ್ಚು ಶ್ರದ್ಧೆಯನ್ನು ಈ ವಿಷಯದಲ್ಲಿ ಅನುಸರಿಸದಿದ್ದಲ್ಲಿ ಜನರಲ್ಲಿ ಹಾಹಾಕಾರವು ಹೆಚ್ಚುವುದು. ಇಂದಿನ ಸ್ಥಿತಿಯು ಬದಸ್ಥು ಜಾಗ್ರತೆಯಲ್ಲಿ ಮುಕ್ಕಾಯವಾಗುವಂತೆ ಸರ್ಕಾರದವರು ವಿಪರ್ಯಾಡುಮಾಡುವುದು ಅವಶ್ಯವು.

## ಅಮೇರಿಕದಲ್ಲಿ ಜನರ ಸ್ಥಿತಿಗತಿ

ಈಗ ಅಮೇರಿಕಾದಲ್ಲಿ ಪ್ರತಿಯೊಬ್ಬನಿಗೂ 300 ರೂಪಾಯಿಗಳಿಗೆ ಕಡಮೆ ಇಲ್ಲದೆ ನಗದಿರುವುದೆಂದು ತಿಳಿಯಬಂದಿದೆ. ಒಂದು ವರ್ಷದ ಕೆಳಗೆ 228 ರೂಪಾಯಿ ಮಾತ್ರ ಇದ್ದಿತ್ತು. 1929 ರಲ್ಲಿ 123 ರೂಪಾಯಿ ಇದ್ದುದು ಇದುವರೆಗೂ ಏರಲಿಲ್ಲ. ಟಂಕಸಾಲೆ ಬಿಟ್ಟವೇಲೆ ಈ ಹಣವೆಲ್ಲಾ ಏನಾಯಿತು ? ಸರ್ಕಾರದವರು ಹೇಳುವುದು.— (1) ಸೀಪಾಯಿಗಳ ಕೈಲಿಗಿತ್ತೆ. (2) ಹೊಸ ವ್ಯಾಪಾರಕ್ಕೆ ಉಪಯೋಗಿಸಲಾಗುತ್ತಿರುವದ. (3) ಕೂಡಿಡುವುದು. ಇಂಡಿಯಾದಲ್ಲೋ ?

## ಸರಿಸಮಾನತೆಯ !

ಪ್ರಪಂಚದಲ್ಲಿಯ ಮಾನವ ಸಂಘಕ್ಕೆ ಎಲ್ಲಾ ಸಮಾನ ಸ್ವಾತಂತ್ರ್ಯವೂ, ಸಮಾನ ಹಕ್ಕುಗಳೂ ಇರಬೇಕೆಂಬ ವಿಷಯವನ್ನು ಮಿತ್ರಮಂಡಲಿಯವರು ಒಪ್ಪಿ ಚೀಣಾದೇಶದಲ್ಲಿಯ ತಮ್ಮ ಹಕ್ಕುಗಳನ್ನೆಲ್ಲವನ್ನೂ ಬಟ್ಟಿರುಪಿಕೆಯು ಶತ್ರುದೇಶಿಯರಿಗೆ ಆಧ್ಯಾತ್ಮಕವಾಗಿ ಸಿಡಿಲು ಬಡಿದಂತಾಗಿದೆಯೆನ್ನಬಹುದು.

## ವಿವಿಧ ವರ್ತಮಾನಗಳು

ಗಾಂಧೀಜಿಯವರೊಬ್ಬರೇ ಜಾರತದ ಬಿಕ್ಕಟ್ಟನ್ನು ಪರಿಹರಿಸಬಲ್ಲರೆಂದು ಲಂಡನ್ನಲ್ಲಿ ಪ್ರೊ || ವುಡ್‌ರವರು ತಿಳಿಯಪಡಿಸಿರುವರು.

ಸಂಯುಕ್ತ ಅಮೇರಿಕಾದ ನ್ಯಾರ್ಸ್ ಎಂಬ ವಿಮಾನವು 70 ಟನ್ ಸಾಮಾನುಗಳನ್ನು ಒಯ್ಯುವುದು. ಈ ವಿಮಾನದ ಮೇಲೆ 35 ಜನರು ನಿಲ್ಲಬಹುದು. ರಕ್ಷ್ಯಗಳ ಕೆಳಗೆ 215 ಜನರು ಕೂತುಕೊಳ್ಳಬಹುದು.

ಕೆಳೆದ 6 ತಿಂಗಳಲ್ಲಿ ಆಸ್ಟ್ರೇಲಿಯಾ ದೇಶವು 253083000 ಪೌಂಡುಗಳನ್ನು ಯುದ್ಧ ನಿಮಿತ್ತವಾಗಿ ವ್ಯಯಮಾಡಿದೆ.

ಕುಂಭಕೋಣಡಲ್ಲಿ ಒಚ್ಚಲು ಮತ್ತು ನೀರಿನ ಕಂದಾಯ ಸ್ವಲ್ಪ ತಗ್ಗಿಸಲ್ಪಟ್ಟಿದೆ.

1943 ನೇ ವಸಂತಋತುವು ಟರ್ಕಿಕೆ ತುಂಬಾ ಭೂಮಂಕರವಾಗಿರುವುದೆಂದು ವಿಲಿಟರಿ ಸಮಾಲೋಚಕರಿಗಳರರ ಅಭಿಮತ.

ಸ್ವೀಡನ್ನನ್ನು ಮಿತ್ರಪಕ್ಷದವರು ಮುತ್ತಿಗೆ ಹಾಕಬೇಕೆಂದು ಚರ್ಚಿಲ್ ಸಂಕಲ್ಪಿಸಿದ್ದಾರೆಂದು ತಿಳಿದುಬಂದಿದೆ.

ರಷ್ಯಾದಿಂದ ಬಿಲ್ಲಿಯು ಅಮೆರಿಕಾ ರಾಜ್ಯಗಳ ಸಂಬಂಧವನ್ನು ತ್ಯಜಿಸುವೆನೆಂದು.

ಮಾಸ್ಕೋ ಸುದ್ದಿಗಾರರು ಹೇಳುತ್ತಾರೆ— ಜರ್ಮನರು ರಷ್ಯಾದಲ್ಲಿ ಒಂದು ತರಹ ಇಟ್ಟಿಗೆಯನ್ನು ಶತ್ರುಗಳು ಬರುವ ರಸ್ತೆಯಲ್ಲಿ ಹಾಕುವರು ; ಈ ಇಟ್ಟಿಗೆಯು ಕಾಲು 1500 ಡಿಗ್ರಿ ಇರುತ್ತದೆ ಜನರ ಕೂದಲಾಗಲೀ ಕೈಕಾಲುಗಳ ಉಗುರಾಗಲೀ ಒಂದು ಉಳಿಯದೆ ತಕ್ಷಣ ಬಿದ್ದು ಹೋಗುವುದು


## Short & Local Ads

ಎಸ್. ವಿ. ಶೆಣೈರವರ
ಮುಂಗಳೂರು ಗುಲಾಬಿನ
ಬೀಡಿಗಳನ್ನೇ ಉಪಯೋಗಿಸಿ
ಒಳ್ಳೇ ನಿಸ್ಸಾಣಿ ಜೊಗೆಸೊಪ್ಪಿನಿಂದಲೇ ತಯಾರಿಸಿದ ಈ ಬೀಡಿಯನ್ನು ಒಂದಾಪ ತಿ ಉಪಯೋಗಿಸಿದರೆ ಖಂಡಿತವಾಗಿ ನಿಮ್ಮನ್ನು ಆಕರ್ಷಿಸುವುದು.
ಎಲ್ಲೆಲ್ಲಿಯೂ ಏಜೆಂಟರ್ಸ್‌ಬೇಕು.
ವಿವರಗಳಿಗೆ— ಪಿ. ವಂಜಪ್ಪ,
ಹಳೇ ಅಗ್ರಹಾರ ಮೈಸೂರು.

ಉದ್ದಮ ಕಾಫೀ
ಸುವಾಸನೆ ! ಅತ್ಯಂತ ರುಚಿ !
ಯಾವಾಗಲೂ ಲಕ್ಷ್ಮೀನಾರಾಯಣ ಕಾಫೀಪುಡಿಯನ್ನೇ ಉಪಯೋಗಿಸಿ.
ಲಕ್ಷ್ಮೀನಾರಾಯಣ ಕಾಫೀವರ್ಕ್ಸ್ !
ಕೊಳ್ಳೇಗಾಲ

ಸತ್ಯವಾದಿ ವಾರಪತ್ರಿಕೆಗೆ
ಚಂದಾದಾರರಾಗಿರಿ
ಚಂದಾ ಮೈಸೂರು ಮತ್ತು ಏಜೆಂಟರಿಗೆ
ತಿಂಗಳಿಗೆ 2 ಆಣೆ
ಪೋಸ್ಟೇಜ್ ಚಂದಾ ವರ್ಷಕ್ಕೆ ಅಂಚೆವೆಚ್ಚ

For Invigorating Coffee & Tea
Sastry's Coffee Rooms
Chamarajapuram, Myaore

ಅಪೇರ
ಕುನ್ನಾರ್ ಬಾಪ್
2 ನೇ ಅಮೋಘವಾರ


Edited, Printed & pnblished by M. S. Krishna Rao, at the Satyavadi Press. Chamaraja Agrahar, Mysore.